ದಿನಾಂಕ 02-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಪಿ.ಎಸ್.ಹೆಚ್ ವಕೀಲರಿಂದಃ**

5. ನನ್ನ ಪೂರ್ಣ ಹೆಸರು ಮಂಜುನಾಥ ಶಿವಾಜಪ್ಪ ಚೌಹಾಣ. ನಾನು 7 ನೇ ತರಗತಿವರೆಗೂ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ಓದಲು, ಬರೆಯಲು ನನಗೆ ಬರುತ್ತದೆ. ನನ್ನ ತಾಯಿಯವರು ಎಷ್ಟನೇ ಇಸವಿಯಲ್ಲಿ ಹುಟ್ಟಿರುತ್ತಾರೆ ಎಂಬ ಬಗ್ಗೆ ನಾನು ಅವರನ್ನು ಕೇಳಿರುವುದಿಲ್ಲ. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಲಾಯಿತು ಸದರಿ ದಾಖಲೆ ಶ್ರೀಮತಿ ತುಳಸವ್ವ ಕೋಂ ದುರುಗಪ್ಪ ಹುನಗುಂದ ರವರ ಜನ್ಮ ದಿನಾಂಕದ ಪ್ರಮಾಣ ಪತ್ರದ ದೃಢೀಕೃತ ನಕಲಾಗಿರುತ್ತದೆ. ಅದರಲ್ಲಿ ಇರುವ ಜನನ ದಿನಾಂಕ ಆದ 01-01-1949 ಸರಿ ಇರುತ್ತದೆ ಎಂದು ಸಾಕ್ಷಿ ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿ.ಡಿ-1 ಎಂದು ಗುರುತಿಸಲಾಯಿತು.

6. ನನ್ನ ತಾಯಿ ಸಹ ವಿದ್ಯಾಭ್ಯಾಸವನ್ನು ಮಾಡಿಕೊಂಡು ಅವರಿಗೂ ಸಹ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ನನ್ನ ದೊಡ್ಡಮ್ಮಳಾದ ಬಸವಣ್ಣೆವ್ವ ಅವರಿಗೆ 3 ಜನ ಮಕ್ಕಳು. ಅವರ ಹೆಸರುಗಳು ಹನುಮಂತಪ್ಪ, ಅಶೋಕಪ್ಪ ಹಾಗೂ ಶಾಂತವ್ವ. ಅವರಲ್ಲಿ ಹನುಮಂತಪ್ಪ ಅವರು ಮರಣ ಹೊಂದಿರುತ್ತಾರೆ. ಅವರು ಯಾವ ವರ್ಷದಲ್ಲಿ ಮರಣ ಹೊಂದಿರುತ್ತಾರೆ ನನಗೆ ನೆನಪಿಲ್ಲ. ನನ್ನ ತಾಯಿಯ ಘರಾಣೆಯ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ಸತ್ಯಾಂಶ ಗೊತ್ತಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ನನ್ನ ತಾಯಿಯ ಸಾಕ್ಷ್ಯವನ್ನು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ.

- 15 -

7. ಅವಿಭಕ್ತ ಕುಟುಂಬ ಎಂದರೆ ಕೂಡು ಕುಟುಂಬ. ದಾವಾ ಆಸ್ತಿಗಳು ಯಾವ ಆಸ್ತಿಗಳು ಆಗಿರುತ್ತವೆ ಎಂಬ ಬಗ್ಗೆ ನನಗೆ ಗೊತ್ತು. ಸದರಿ ದಾವೆಯಲ್ಲಿ 3 ಆಸ್ತಿಗಳ ಬಗ್ಗೆ ಶೆಡ್ಯೂಲ್ ಗಳನ್ನು

ನಮೂದಿಸಿರುತ್ತೇವೆ. ಸಾಗರವಳ್ಳಿ ಗ್ರಾಮದ ಸ ನಂಃ 22/2 ರ 2 ಎಕರೆ 26 ಗುಂಟೆ. ಮಂಥಗಿ ಗ್ರಾಮದ ಸ ನಂಃ 161/4 ರ 4 ಎಕರೆ 4 ಗುಂಟೆ. ಸದರಿ ಆಸ್ತಿಗಳ ಚಕ್ಕುಬಂದಿಗಳು ಹೇಳಲು ನನಗೆ ಬರುವುದಿಲ್ಲ. ಮಂಥಗಿ ಗ್ರಾಮದ ಮನೆ ಆಸ್ತಿಯಾದ 223. ಎರಡು ಕೆಂಪು ಹಂಚಿನ ಮನೆ ಹಾಗೂ ಹಿತ್ತಲು ಇರುತ್ತದೆ. ಸದರಿ ಆಸ್ತಿಯ ಚಕ್ಕುಬಂದಿಗಳು ಹೇಳಲು ನನಗೆ ಬರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

SD/-
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ